## ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ಶ್ರೀ ಡಿ.ಎಸ್.ಅರುಣ್ ರವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ಪ್ರಶ್ನೆ:** ರಾಜ್ಯದಲ್ಲಿ ಕಳೆದ ಒಂದು ವರ್ಷ ಅವಧಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಅಮಾಯಕರ ಕೊಲೆ, ಹತ್ಯೆಯಂತಹ ಘಟನೆಗಳಿಂದ ರಾಜ್ಯದ ಜನತೆ ಆತಂಕಕ್ಕೆ ಒಳಗಾಗಿರುವ ಕುರಿತು.

**ಉತ್ತರ:** ರಾಜ್ಯದಲ್ಲಿ 2021 ರಿಂದ ಇಲ್ಲಿಯವರೆಗಿನ ಅವಧಿಯಲ್ಲಿ ನಡೆದ ಕೊಲೆ/ಹತ್ಯೆ ಪ್ರಕರಣಗಳ ವರ್ಷವಾರು ಅಂಕಿ-ಅಂಶಗಳ ವಿವರ ಕೆಳಗಿನಂತಿದೆ.

| ವರ್ಷ | | ವರದಿಯಾದ ಪ್ರಕರಣಗಳು | ಪತ್ತೆಮಾಡಲಾದ ಪ್ರಕರಣಗಳು | ಪತ್ತೆಮಾಡಲಾಗದ ಪ್ರಕರಣಗಳು | 'ಬಿ' ವರದಿ | ಇತರೆ ವಿಲೇವಾರಿ | ತನಿಖಾ ಹಂತದ ಪ್ರಕರಣಗಳು |
|---|---|---|---|---|---|---|---|
| 2021 | | 1342 | 1272 | 70 | 70 | 4 | 9 |
| 2022 | | 1370 | 1329 | 41 | 86 | 2 | 24 |
| 2023 | 01.01.2023 ರಿಂದ 31.05.2023 | 542 | 533 | 9 | 25 | 0 | 26 |
| | 01.06.2023 ರಿಂದ 31.12.2023 | 754 | 752 | 2 | 19 | 0 | 69 |
| 2024 | 01.01.2024 ರಿಂದ 30.06.2024 | 633 | 633 | 0 | 5 | 0 | 313 |

ರಾಜ್ಯದಲ್ಲಿ ಕೊಲೆ ಮತ್ತು ಇತರೆ ಕಾನೂನು ಸುವ್ಯವಸ್ಥೆಗೆ ಭಂಗವನ್ನುಂಟು ಮಾಡುವುದನ್ನು ತಡೆಗಟ್ಟಲು ಪೊಲೀಸ್ ಇಲಾಖೆಯು ಕೈಗೊಂಡ ಕ್ರಮಗಳು ಈ ಕೆಳಗಿನಂತಿದೆ:-

- ಕೊಲೆ ಪ್ರಕರಣಗಳು ವ್ಯಕ್ತಿಗಳ/ಗುಂಪುಗಳ ಮಧ್ಯದ ವೈಯಕ್ತಿಕ ದ್ವೇಷ ಮತ್ತು ಪ್ರತೀಕಾರದಿಂದ ಸಂಭವಿಸಬಹುದಾಗಿರುತ್ತವೆ. ಆದ್ದರಿಂದ ಈ ರೀತಿಯ ಮಾಹಿತಿ ದೊರೆತ ಕೂಡಲೇ ಪೊಲೀಸರು ಸೂಕ್ತ ಕ್ರಮಕೈಗೊಂಡು ಕೊಲೆ/ಹತ್ಯೆ ಘಟನೆಗಳು ಜರುಗದಂತೆ ನೋಡಿಕೊಳ್ಳಲಾಗುವುದು.
- ಬಹಳಷ್ಟು ಪ್ರಕರಣಗಳಲ್ಲಿ ದೂರು ಮತ್ತು ಪ್ರತಿ ದೂರು ಬಂದಂತಹ ಸಂದರ್ಭದಲ್ಲಿ ಎರಡು ದೂರುದಾರರು ಮತ್ತು ಪ್ರತಿ ದೂರುದಾರರಿಗೆ ತಿಳುವಳಿಕೆ ನೀಡಿ, ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಪಿಎಆರ್ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.
- ಯಾವುದೇ ರೀತಿಯ ದೂರು ಬಂದಾಗಲೂ ಸಹ ದೂರನ್ನು ಕೂಲಂಕಷವಾಗಿ ಪರಿಶೀಲಿಸಿ, ಪೊಲೀಸ್ ಠಾಣೆಯ ದಾಖಲಾತಿಯಲ್ಲಿ ನಮೂದಿಸಿ, ಪ್ರತಿ ದೂರನ್ನು ಸಹ ಬಗೆಹರಿಸಲು ಕ್ರಮಕೈಗೊಳ್ಳಲಾಗುತ್ತಿದೆ.
- ಸಮಾಜದಲ್ಲಿ ಅಶಾಂತಿ ತೋರಿದ ವ್ಯಕ್ತಿಗಳನ್ನು ಕಾನೂನಿನ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ, ಸಮಾಜದಲ್ಲಿ ಶಾಂತಿ ಕಾಪಾಡುವಂತೆ ಬಾಂಡ್‌ಗಳನ್ನು ಬರೆಸಿಕೊಳ್ಳಲಾಗುತ್ತಿದೆ. ಹಾಗೂ ಕೆಲವೊಂದು ಪ್ರಕರಣಗಳಲ್ಲಿ ಸಮಾಜಕ್ಕೆ ಅಶಾಂತಿ ತರುವಂತಹ ವ್ಯಕ್ತಿಗಳನ್ನು ಗಡಿಪಾರು ಮಾಡಲು ಹಾಗೂ ಗೂಂಡಾ ಕಾಯ್ದೆಯಡಿಯಲ್ಲಿ ಕ್ರಮಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

- ➢ ಯಾವುದೇ ರೀತಿಯ ಘಟನೆಗಳು ಜರುಗುವ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಘಟನಾ ಸ್ಥಳಕ್ಕೆ ಪೊಲೀಸರು ಅಧಿಕಾರಿಗಳು ತಲುಪುವ ಸಂಬಂಧ ಕರ್ನಾಟಕ ರಾಜ್ಯದಲ್ಲಿ ಇ.ಆರ್.ಎಸ್.ಎಸ್. (112) ವ್ಯವಸ್ಥೆಯನ್ನು ನಿರ್ವಹಿಸಲಾಗುತ್ತಿದೆ.
- ➢ ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಪ್ಯಾನಿಕೋಡ್, ಪಿಂಕ್ ಹೊಯ್ಸಳ, ಮಹಿಳಾ ಠಾಣೆ, ಮಹಿಳಾ ವಿಶೇಷ ಪೊಲೀಸ್ ಪಡೆಗಳನ್ನು ಸ್ಥಾಪಿಸಲಾಗಿರುತ್ತದೆ.
- ➢ ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲ ಮೀಟಿಂಗ್, ನಾಗರಿಕ ಸಮಿತಿ ಸಭೆಗಳನ್ನು ನಡೆಸಿ, ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ.
- ➢ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ಸಾಮಾಜಿಕ ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗುತ್ತಿದೆ.
- ➢ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಬೀಟ್ ಮತ್ತು ಶುಭೋದಯ (ಗುಡ್ ಮಾರ್ನಿಂಗ್) ಬೀಟುಗಳನ್ನು ಕೈಗೊಳ್ಳಲಾಗಿದೆ. ಏಕ ಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗುತ್ತಿದೆ.
- ➢ ಪ್ರಮುಖ ಹಬ್ಬದ ಆಚರಣೆಗಳ ಸಂದರ್ಭದಲ್ಲಿ ಎಲ್ಲಾ ಸಮುದಾಯಗಳ ಮುಖಂಡರುಗಳನ್ನು ಒಳಗೊಂಡ ಶಾಂತಿ ಸಭೆಗಳನ್ನು ಜಿಲ್ಲಾ ಮಟ್ಟದಲ್ಲಿ, ಉಪ-ವಿಭಾಗದ ಮಟ್ಟದಲ್ಲಿ ಮತ್ತು ಪೊಲೀಸ್ ಠಾಣೆ ಮಟ್ಟದಲ್ಲಿ ನಡೆಸಲಾಗುತ್ತಿದೆ.
- ➢ ಗಲಭೆ ಪ್ರಕರಣಗಳಲ್ಲಿ ಭಾಗಿಯಾಗುವ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ರೀತ್ಯಾ ಕ್ರಮಗಳನ್ನು ಜರುಗಿಸಲಾಗುತ್ತಿರುತ್ತದೆ.
- ➢ ಗುಪ್ತ ಮಾಹಿತಿ ಸಿಬ್ಬಂದಿ ಹಾಗು ಬೀಟ್ ಸಿಬ್ಬಂದಿಯವರ ಮೂಲಕ ಮುಂಗಡವಾಗಿ ಮಾಹಿತಿಯನ್ನು ಸಂಗ್ರಹಿಸಿ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಸೂಕ್ತ ಕ್ರಮ ಕೈಕೊಳ್ಳಲಾಗುತ್ತಿದೆ.
- ➢ ದಿನದ 24 ಗಂಟೆಗಳ ಕಾಲ ಗಸ್ತು ಕರ್ತವ್ಯಕ್ಕಾಗಿ ಶಕ್ತಿ ಪೆಟ್ರೋಲಿಂಗ್, ಹೊಯ್ಸಳ ವಾಹನ ನಿಯಮಿತವಾಗಿ ನಿಯೋಜಿಸಿ, ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವಂತಹ ರೌಡಿಗಳಿಗೆ ಕಠಿಣವಾದ ಎಚ್ಚರಿಕೆಗಳನ್ನು ನೀಡಿ, ಯಾವುದೇ ಕೃತ್ಯಗಳನ್ನು ಮಾಡಿದಾಗ ಅವರ ಮೇಲೆ ಆಗುವ ಪರಿಣಾಮಗಳ ಗಂಭೀರತೆಯ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲಾಗಿರುತ್ತದೆ.
- ➢ ಸಾಮಾಜಿಕ ಜಾಲ ತಾಣಗಳಲ್ಲಿ ಕೋಮು ಸೌಹಾರ್ದತೆ & ಕದಡುವ ವ್ಯಕ್ತಿಗಳನ್ನು ಗುರುತಿಸಿ ಅಂಥವರ ಮೇಲೆ ನಿಗಾ ಇಡಲಾಗುತ್ತಿದೆ.
- ➢ ರಾಜ್ಯದಲ್ಲಿ ಕೋಮು ಗಲಭೆಗಳಿಂದ ಯಾವುದೇ ರೀತಿಯ ಕೊಲೆಗಳು ನಡೆಯದಂತೆ ಹಾಗೂ ಕೊಲೆಗಳಿಗೆ ಪ್ರಚೋದನೆ ನೀಡುವ ಯಾವುದೇ ರೀತಿಯ ಸಾಮಾಜಿಕ ಜಾಲತಾಣದಲ್ಲಿ ಪ್ರಸಾರ ಮಾಡುವ ಸಂದೇಶಗಳನ್ನು ಪತ್ತೆ ಹಚ್ಚಿ ಆರೋಪಿಗಳ ಮೇಲೆ ಕ್ರಮಕೈಗೊಳ್ಳಲು ಸಾಮಾಜಿಕ ಜಾಲತಾಣ ನಿಗಾ ಘಟಕಗಳನ್ನು ಜಿಲ್ಲಾ ಹಾಗೂ ಪೊಲೀಸ್ ಠಾಣಾ ಮಟ್ಟದಲ್ಲಿ ತೆರೆಯಲಾಗಿರುತ್ತದೆ.

ಮೇಲೆ ವಿವರಿಸಲಾದಂತೆ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಸರ್ಕಾರವು ಸೂಕ್ತವಾಗಿ ಮತ್ತು ಸಮರ್ಥವಾಗಿ ಕ್ರಮವಹಿಸುತ್ತಿದ್ದು, ರಾಜ್ಯದ ಜನತೆ ಆತಂಕಕ್ಕೆ ಒಳಗಾಗುವ ಅಗತ್ಯವಿರುವುದಿಲ್ಲ.

---

ಹೆಚ್‌ಡಿ 339 ಎಸ್‌ಎಸ್‌ಟಿ 2024

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು